



ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಇರುವಂತಹದ್ದೇ ಪುಟಾಣಿ ರೈಲು ಇಂಟರ್‌ಲೇಕನ್‌ನಲ್ಲೂ ಇದೆ.

ನಗರಗಳಿಂದ ಬಸ್ ಸೌಕರ್ಯವಿದೆ.

ಜುಂಗ್ಫ್ರುವಿನಲ್ಲಿ ಯೂರೋಪಿನ ಅತಿ ಎತ್ತರದ ರೈಲ್ವೇ ಸ್ಟೇಷನ್ ಇರುವುದು ವಿಶೇಷ. 1955ರ ನಂತರ ಇಂಟರ್‌ಲೇಕನ್ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ವಿಚಾರಗೋಷ್ಠಿಗಳ ಆಯೋಜನೆಯ ಸ್ಥಳವಾಗಿಯೂ ಖ್ಯಾತವಾಗಿದೆ.

ಎರಡೂ ಸರೋವರಗಳು ಹಾಗೂ ಆರೆ ನದಿಯಲ್ಲಿ ದೋಣಿ ವಿಹಾರಕ್ಕೆ ಅವಕಾಶವಿದೆ. ಜುಂಗ್ಫ್ರು ಹೆಸರಿನದೇ ಮನರಂಜನಾ ಉದ್ಯಾನವೂ ಇದೆ. ಚಾರಣ, ಪ್ಯಾರಾ ಗ್ಲೈಡಿಂಗ್, ದೋಣಿ ವಿಹಾರ, ಹಿಮ ಜಾರಿಕೆ, ಹ್ಯಾಂಗ್ ಗ್ಲೈಡಿಂಗ್ ಮುಂತಾದ ಸಾಹಸಕ್ರೀಡೆಗಳಿಗೆ ಇಂಟರ್‌ಲೇಕನ್ ಪ್ರಸಿದ್ಧ. ನುರಿತ ಮಾರ್ಗದರ್ಶಿಗಳು ಇಲ್ಲಿ ಲಭ್ಯವಿದ್ದು, ಸಲಹೆ ಸಹಕಾರ ನೀಡಲು ಅನೇಕ ಸಂಸ್ಥೆಗಳಿವೆ.

ಬೇಸಗೆಯಲ್ಲಿ 'ಹಸಿರುಹಾಸಿನ ಹಬ್ಬ' ಇಂಟರ್‌ಲೇಕನ್‌ನ ಹೊರವಲಯದಲ್ಲಿ ನಡೆಯುತ್ತದೆ. ಸೆಪ್ಟೆಂಬರ್ ತಿಂಗಳಲ್ಲಿ ಜುಂಗ್ಫ್ರು ಮ್ಯಾರಥಾನ್ ನಡೆಯುತ್ತದೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ 'ರಾಷ್ಟ್ರೀಯ ಹಬ್ಬ' (Unspunnen fest) 2017ರಲ್ಲಿ ನಡೆದಿದ್ದು, 2029ರಲ್ಲಿ ಮತ್ತೆ ನಡೆಯಲಿದೆ. ಆ ಹಬ್ಬದ ಅಂಗವಾಗಿ ಸಾಂಪ್ರದಾಯಿಕ ಸ್ವಿಸ್ ಸಂಸ್ಕೃತಿಯ ಅನಾವರಣದ ಜತೆಗೆ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ.

ಹಳೆಯ ಮೊನಾಸ್ಟ್ರಿ, ಹೋಟೆಲ್ ರಾಯಲ್ ಸೈಂಟ್ ಜಾರ್ಜ್, ಹೋಟೆಲ್ ವಿಕ್ಟೋರಿಯಾ ಜುಂಗ್ಫ್ರು, ಕುರ್ಸಾಲ್ ಕಟ್ಟಡಗಳನ್ನು ಸ್ವಿಸ್ ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲಾಗಿದೆ. ಸಂಪೂರ್ಣ ಇಂಟರ್‌ಲೇಕನ್ ಪಟ್ಟಣವನ್ನೇ 'ಸ್ವಿಸ್ ಪಾರಂಪರಿಕ ತಾಣ'ದ ಒಂದು ಭಾಗವೆಂದು ಪರಿಗಣಿಸಲಾಗಿದೆ.

ಎಲ್ಲೆಡೆ ಕಣ್ಸೆಳೆಯುವ ಹಸಿರು, ಹಿಮಾವೃತ ಶಿಖರಗಳು, ಬಗೆ ಬಗೆಯ ಮನರಂಜನಾ ಕ್ರೀಡೆಗಳು ಇವೆಲ್ಲಾ ಪ್ರವಾಸಿಗರ ಮನತಣಿಸಲು ನೆರವಾಗುತ್ತವೆ. ಪ್ಯಾರಾ ಗ್ಲೈಡಿಂಗ್ ಮಾಡಲೆಂದು ನಾವು ಏಜೆನ್ಸಿಯೊಂದರಲ್ಲಿ ವಿಚಾರಿಸಿದೆವು. ಅಂದು ಹವಾಮಾನ ಅನುಕೂಲಕರ ಆಗಿಲ್ಲದಿದ್ದುದರಿಂದ ಸಾಧ್ಯವಿಲ್ಲ ಎಂಬ ಮಾಹಿತಿ ದೊರೆತು ನಿರಾಶರಾದೆವು.

ಪ್ರತಿಕ್ರಿಯಿಸಿ: feedback@sudha.co.in